# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1610<br>(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವರ್ಗಾವಣೆ ಗೊಂಡಿರುತ್ತದೆ) |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 21.03.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮಗಳ ಗ್ರಾಮಠಾಣ ಗಡಿಯನ್ನು ಗುರುತಿಸಿ / ನಿಗಧಿಪಡಿಸಿದ್ದು ಯಾವಾಗ; ಅಂದಿನ ರಾಜ್ಯದ ಜನಸಂಖ್ಯೆ ಎಷ್ಟು ಮತ್ತು ಪ್ರಸ್ತುತ ರಾಜ್ಯದ ಜನಸಂಖ್ಯೆ ಎಷ್ಟು; | ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮಿನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ ಪ್ರದೇಶಗಳನ್ನು (ಗ್ರಾಮ ಠಾಣಾವನ್ನು) ಜಮೀನು ಸ್ಥಿತಿಯಂತೆ ಗುರ್ತಿಸಿ ದಾಖಲೆಗಳನ್ನು ತಯಾರಿಸಲಾಗಿರುತ್ತದೆ. ಅದರಂತೆ, ಗ್ರಾಮ ನಕಾಶೆಯಲ್ಲಿ "ಊರು" ಎಂದು ದಾಖಲಿಸಲಾಗಿದೆ.<br><br>ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕೆಳಕಂಡ ವರ್ಷಗಳಲ್ಲಿ ಭೂಮಾಪನ (ಮೂಲ ಸರ್ವೇ & ರಿ-ಸರ್ವೇ ) ಕಾರ್ಯ ಕೈಗೊಂಡು ಭೂದಾಖಲೆಗಳನ್ನು ತಯಾರಿಸಲಾಗಿದೆ.<br><br>ಪ್ರಾಂತ್ಯ — ಮೂಲ ಸರ್ವೇ — ರಿ-ಸರ್ವೇ<br>ಹಳೇ ಮೈಸೂರು ಪ್ರಾಂತ್ಯ — 1863-1899 — 1900-1917<br>ಮುಂಬೈ ಪ್ರಾಂತ್ಯ — 1840-1863 — 1906-1921<br>ಮದರಾಸು ಪ್ರಾಂತ್ಯ — 1863-1904 — 1923-1935<br>ಹೈದರಾಬಾದ್ ಪ್ರಾಂತ್ಯ — 1875-1888 — 1906-1916<br>ಕೊಡಗು ಪ್ರಾಂತ್ಯ — 1806-1816 — 1906-1920<br><br>2011ರ ಜನಗಣತಿಯನ್ವಯ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯು 6,10,95,297 ಆಗಿದ್ದು, ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ 2021ರ ಜನಗಣತಿ ಕಾರ್ಯವನ್ನು ನಡೆಸದ ಕಾರಣ ಕರ್ನಾಟಕ ರಾಜ್ಯದ ಪ್ರಸ್ತುತ ಜನಸಂಖ್ಯೆಯ ಮಾಹಿತಿಯು ಲಭ್ಯವಿಲ್ಲ. |
| ಆ) | ಗ್ರಾಮಠಾಣಾ ವ್ಯಾಪ್ತಿಯಲ್ಲಿ ಮನೆ ನಿರ್ಮಾಣಕ್ಕೆ ಸ್ಥಳವಿಲ್ಲದ ಕಾರಣ ಗ್ರಾಮೀಣ ಪ್ರದೇಶದ ಜನತೆ ಕಂದಾಯ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಕಂದಾಯ ಭೂಮಿಯಲ್ಲಿ ನಿರ್ಮಾಣ ಮಾಡಿಕೊಳ್ಳುತ್ತಿರುವ ಮನೆಗಳಿಗೆ ಸರ್ಕಾರದ ವತಿಯಿಂದ ಇ-ಖಾತಾ ನೀಡಲಾಗುತ್ತಿದೆಯೇ; | ಬಂದಿದೆ<br><br>ದಿನಾಂಕ::14.06.2013 ಕ್ಕಿಂತ ಪೂರ್ವದಲ್ಲಿ ಮನೆ ನಿರ್ಮಿಸಿಕೊಂಡು ವಿದ್ಯುತ್ ಬಿಲ್ ಪಾವತಿಸಿರುವ ಕಟ್ಟಡಗಳಿಗೆ ನಮೂನೆ-11ಬಿ ನೀಡಲಾಗುತ್ತಿದೆ. |

| | | |
|---|---|---|
| ಇ) | ಯಾವ ಪ್ರಕಾರದ ಆಸ್ತಿಗಳಿಗೆ ಬಿ-ಖಾತಾ ನೀಡಲಾಗುತ್ತಿದೆ ಮತ್ತು ಯಾವ ದಿನಾಂಕದ ನಂತರ ಸೃಜನೆಯಾದ ಆಸ್ತಿಗಳಿಗೆ ಬಿ-ಖಾತಾ ನೀಡಲಾಗುತ್ತಿದೆ; ಬಿ-ಖಾತಾ ನೀಡಲು ಪಡೆಯುತ್ತಿರುವ ದಾಖಲೆಗಳು ಯಾವುವು? | ದಿನಾಂಕ:14.06.2013ರ ಪೂರ್ವದಲ್ಲಿ ಒಂದು ಬಾರಿ ಕ್ರಯವಾಗಿರುವ ನಿವೇಶನಗಳು ಮತ್ತು ಮನೆ ನಿರ್ಮಿಸಿಕೊಂಡು ವಿದ್ಯುತ್ ಬಿಲ್ ಪಾವತಿಸಿರುವ ಕಟ್ಟಡಗಳಿಗೆ ನಮೂನೆ-11ಬಿ ನೀಡಲಾಗುತ್ತಿದೆ.<br><br>ಸರ್ಕಾರದ ಸುತ್ತೋಲೆ-2 ಸಂಖ್ಯೆ: ಗ್ರಾಅಪ 441 ಗ್ರಾಪಂಅ 2016 (ಭಾಗ-1), ದಿನಾಂಕ:23-06-2016 ರಲ್ಲಿ ನಮೂನೆ-11ಬಿ ವಿತರಿಸಲು ಅವಶ್ಯಕವಾಗಿರುವ ದಾಖಲೆಗಳ ಚೆಕ್‌ಲಿಸ್ಟ್‌ಗಳ ಬಗ್ಗೆ ತಿಳಿಸಲಾಗಿದೆ. ಸುತ್ತೋಲೆ ಅನುಬಂಧದಲ್ಲಿ ನೀಡಿದೆ. |
| ಈ) | ಸದರಿ ಬಿ-ಖಾತಾಗಳನ್ನು ಯಾವ ಉದ್ದೇಶಗಳಿಗೆ ಬಳಸಬಹುದು ಹಾಗೂ ಇವುಗಳಿಂದ ಖಾತಾದಾರರಿಗೆ ಆಗುವ ಅನುಕೂಲಗಳೇನು; | ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನ 11ಬಿ ವಿತರಿಸಲಾಗುತ್ತಿದೆ. ದಿನಾಂಕ:14.06.2013ರ ಪೂರ್ವದಲ್ಲಿ ಒಂದು ಬಾರಿ ಕ್ರಯವಾಗಿರುವ ನಿವೇಶನಗಳು ಮತ್ತು ಮನೆ ನಿರ್ಮಿಸಿಕೊಂಡು ವಿದ್ಯುತ್ ಬಿಲ್ ಪಾವತಿಸಿರುವ ಕಟ್ಟಡಗಳನ್ನು ನೋಂದಣಿ ಮಾಡಲು ಅವಕಾಶವಿರುತ್ತದೆ.<br><br>ದಿನಾಂಕ:14.06.2013ರ ನಂತರ ಭೂಪರಿವರ್ತನೆಯಾಗಿ ವಿನ್ಯಾಸ ನಕ್ಷೆ ಅನುಮೋದನೆಯಾಗದ ಆಸ್ತಿಗಳನ್ನು ನೋಂದಣಿ ಮಾಡಲು ಅವಕಾಶವಿರುವುದಿಲ್ಲ.<br><br>ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ 11ಬಿ ಪಡೆದು ಸ್ವತ್ತಿನ ತೆರಿಗೆಯನ್ನು ಪಾವತಿಸಲು ಅನುಕೂಲವಾಗುತ್ತದೆ. |
| ಉ) | ಹಲವು ಗ್ರಾಮ ಪಂಚಾಯಿತಿಗಳು ಹಸಿರು ವಲಯದ ಕಾರಣ ನೀಡಿ ಇ-ಖಾತಾ ನೀಡದೆ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ರೀತಿಯ ಸ್ವತ್ತುಗಳಿಗೆ ಇ-ಖಾತಾ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿದೆ.<br><br>ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಕ್ರಮಬದ್ಧವಲ್ಲದ ನಿವೇಶನಗಳು ಮತ್ತು ಕಟ್ಟಡಗಳನ್ನು (ಸರ್ಕಾರಿ/ಸ್ಥಳೀಯ ಸಂಸ್ಥೆ/ಶಾಸನಬದ್ಧ ಸಂಸ್ಥೆ/ಅರಣ್ಯ ಭೂಮಿಯನ್ನು ಹೊರತುಪಡಿಸಿ) ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಪ್ರತ್ಯೇಕ ವಹಿಯಲ್ಲಿ ದಾಖಲಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ಕ್ಕೆ ತಿದ್ದುಪಡಿ ತರಲಾಗುತ್ತಿದೆ. ಅಧಿನಿಯಮಕ್ಕೆ ತರಲಾಗುವ ತಿದ್ದುಪಡಿಯನ್ವಯ ನಿಯಮಗಳನ್ನು ರೂಪಿಸಿ ದಿನಾಂಕ::14.06.2013ಕ್ಕೂ ಮೊದಲು ಹಾಗೂ ನಂತರ ನೋಂದಣಿಯಾದ ಎಲ್ಲಾ ನಿವೇಶನಗಳು ಮತ್ತು ಕಟ್ಟಡಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ಖಾತೆ ನೀಡಲು ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| ಊ) | ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಸ್ವತ್ತುಗಳಿಗೆ ತುರ್ತಾಗಿ /ಆಂದೋಲನದ ಮಾದರಿಯಲ್ಲಿ ಇ-ಖಾತಾ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಮಾನ್ಯ ಮುಖ್ಯಮಂತ್ರಿಯವರು 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 272 (1)ರಲ್ಲಿ ಎಲ್ಲಾ ಅಗತ್ಯ ದಾಖಲೆಗಳನ್ನು ಹೊಂದಿರುವ ಆಸ್ತಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲು "ಇ-ಸ್ವತ್ತು ಅಭಿಯಾನ" ವನ್ನು ಆರಂಭಿಸಲಾಗುವುದೆಂದು ಘೋಷಿಸಿರುತ್ತಾರೆ. ಅದರಂತೆ, ಇ-ಸ್ವತ್ತು ಅಭಿಯಾನ ಆರಂಭಿಸಿ ಇ-ಸ್ವತ್ತು ತಂತ್ರಾಂಶದ ಮೂಲಕ ಕ್ರಮಬದ್ಧ ಆಸ್ತಿಗಳಿಗೆ ನಮೂನೆ-9 ಮತ್ತು 11ಎ ಹಾಗೂ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ 11ಬಿ ವಿತರಿಸಲು ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ಕಂಇ 59 ಎಸ್ಎಸ್‌ಸಿ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

೬೩೭೨೦೬

<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ:ಗ್ರಾಅಪ/441/ಗ್ರಾಪಂಅ/2016 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23-06-2016

## <u>ಸುತ್ತೋಲೆ-2</u>

ವಿಷಯ: ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ವಿತರಿಸಲು ಅವಶ್ಯಕವಾಗಿರುವ ದಾಖಲೆಗಳ ಚೆಕ್‌ಲಿಸ್ಟ್‌ಗಳನ್ನು ಗ್ರಾಮ ಪಂಚಾಯತಿಗಳ ಸೂಚನಾ ಫಲಕಗಳಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013, ದಿನಾಂಕ:14-06-2013.
2) ಸರ್ಕಾರದ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013, ದಿನಾಂಕ:15-06-2013.
3) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013.(ಭಾಗ-6) ದಿನಾಂಕ:21-01-2014.
4) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013.(ಭಾಗ-6) ದಿನಾಂಕ:03-02-2014.
5) ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 04 ಗ್ರಾಪಂಕಾ 2016 ದಿನಾಂಕ:25-02-2016.

---

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2013 ರಲ್ಲಿ ನಿಯಮ 28 ಮತ್ತು 30 ಕ್ಕೆ ದಿನಾಂಕ:14-06-2013 ಮತ್ತು ದಿನಾಂಕ:15-06-2013 ರಲ್ಲಿ ತಿದ್ದುಪಡಿ ತರಲಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಕ್ರಮಬದ್ಧ ಆಸ್ತಿಗಳಿಗೆ ನಿಗದಿತ ನಮೂನೆ 9 ಹಾಗೂ 11 ಎ ರಲ್ಲಿ ದಾಖಲಿಸಲು ದಿನಾಂಕ:15-06-2013 ರಿಂದ ರಾಜ್ಯದ ಗ್ರಾಮ ಪಂಚಾಯತಿಗಳು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11 ಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸುತ್ತಿವೆ. ಉಲ್ಲೇಖ (5) ರ ಸರ್ಕಾರದ ಸುತ್ತೋಲೆಯಲ್ಲಿ ನಮೂನೆ-9 ಮತ್ತು ನಮೂನೆ 11ಎ ಹಾಗೂ 11ಬಿ ಗಳನ್ನು ಯಾವ ವರ್ಗದ ಆಸ್ತಿಗಳಿಗೆ ವಿತರಿಸಬೇಕು ಎಂಬುದರ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9, 11ಎ ಮತ್ತು 11ಬಿ ಗಳನ್ನು ವಿತರಿಸಲು ಅವಶ್ಯಕವಾಗಿರುವ ಈ ಕೆಳಕಂಡ ದಾಖಲೆಗಳ ಚೆಕ್‌ಲಿಸ್ಟ್‌ಗಳನ್ನು ಗ್ರಾಮ ಪಂಚಾಯತಿಗಳ ಸೂಚನಾ ಫಲಕಗಳಲ್ಲಿ ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಕ್ರಮ ವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ತಿಳಿಸಿದೆ.

<u>**ನಮೂನೆ 9 & 11-ಎ ಗೆ ಸಂಬಂಧಪಟ್ಟಂತೆ**</u>

ಅ) <u>**ಗ್ರಾಮ ಠಾಣಾ ವ್ಯಾಪ್ತಿ**</u>

1) ಸ್ಥಳದ ಮಾಲಿಕತ್ವ ದಾಖಲೆ
2) ಗ್ರಾಮಠಾಣಾ ಸ್ಕೆಚ್.
3) ಫಾರಂ ಹೌಸ್ ಬಗ್ಗೆ ದೃಢೀಕರಣ ಪತ್ರ.
4) ಚೆಕ್ಕುಬಂಧಿ ವಿವರ.

ಆ) <u>**ಸ್ಥಳೀಯ ಯೋಜನಾ ಪ್ರಾಧಿಕಾರ ವ್ಯಾಪ್ತಿಯ ಪ್ರದೇಶ ಮತ್ತು ಹೊರಗಿನ ಪ್ರದೇಶ(ನಿವೇಶನ ಮಾತ್ರ)**</u>

1) ಸ್ಥಳದ ಮಾಲಿಕತ್ವ ದಾಖಲೆ/ಕ್ರಯ ಪತ್ರ



File No. RD/59/SSC/2025-RD_SSLR-REVENUE DEPATMENT SEC (Computer No. 1721534)
Generated from eOffice by JAYBHEEM, RD-SA(JB)-sslr, SENIOR ASSISTANT, REVENUE DEPARTMENT SEC on 20/03/2025 11:04 AM

2) ಭೂ ಪರಿವರ್ತಿತ ಆದೇಶದ ಪ್ರತಿ/ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರವರ ಹಿಂಬರಹ ಪ್ರತಿ ಅಥವಾ ಜಿಲ್ಲಾಧಿಕಾರಿಯಿಂದ ಪಡೆದ ಭೂ ಪರಿವರ್ತನಾ ಆದೇಶ.
3) ಒಂದು ವೇಳೆ ಭೂಪರಿವರ್ತನೆಯಾದ ಸ್ಥಳವು ವಿಭಜನೆ ಆಗಿದ್ದಲ್ಲಿ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾದ ಬಡಾವಣೆ ನಕ್ಷೆ.
4. ಪಹಣಿ ಪತ್ರಿಕೆ (ಆರ್.ಟಿ.ಸಿ.)
5) ನಿವೇಶನದ ನಕ್ಷೆ.
5) ಮಾಲಿಕನ ವಿಳಾಸ ಗುರುತಿನ ಪತ್ರ,
6) ದೃಢೀಕೃತ ಗುರುತಿನ ಚೀಟಿ (ಭಾವಚಿತ್ರವಿರುವ)
7) ಚೆಕ್ಕುಬಂಧಿ ವಿವರ.

ಇ) <u>ಸ್ಥಳೀಯ ಯೋಜನಾ ಪ್ರಾಧಿಕಾರ ವ್ಯಾಪ್ತಿಯ ಪ್ರದೇಶ ಮತ್ತು ಹೊರಗಿನ ಪ್ರದೇಶ(ನಿವೇಶನ/ಪರವಾನಿಗೆ ಇರುವ ಕಟ್ಟಡ)</u>

1) ಸ್ಥಳದ ಮಾಲಿಕತ್ವ ದಾಖಲೆ/ಕ್ರಯ ಪತ್ರ
2) ಭೂ ಪರಿವರ್ತಿತ ಆದೇಶದ ಪ್ರತಿ/ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರವರ ಹಿಂಬರಹ ಪ್ರತಿ ಅಥವಾ ಜಿಲ್ಲಾಧಿಕಾರಿಯಿಂದ ಪಡೆದ ಭೂ ಪರಿವರ್ತನಾ ಆದೇಶ.
3) ಪಹಣಿ ಪತ್ರಿಕೆ (ಆರ್.ಟಿ.ಸಿ.)
4) ನಿವೇಶನದ ನಕ್ಷೆ.
5) ಸಂಬಂಧಪಟ್ಟ ಪಂಚಾಯತಿಯಿಂದ ಪಡೆದ ಕಟ್ಟಡ ಪರವಾನಿಗೆ ಮತ್ತು ಅನುಮೋದಿತ ನಕ್ಷೆ.
6) ಕಟ್ಟಡ ತೆರಿಗೆ ರಶೀದಿ ಅಥವಾ ಸದರಿ ಕಟ್ಟಡಕ್ಕೆ ಸಂಬಂಧಪಟ್ಟ ವಿದ್ಯುಚ್ಛಕ್ತಿ ಬಿಲ್
8) ಮಾಲಿಕನ ವಿಳಾಸ ಗುರುತಿನ ಪತ್ರ,
9) ದೃಢೀಕೃತ ಗುರುತಿನ ಚೀಟಿ (ಭಾವಚಿತ್ರವಿರುವ)
10) ಚೆಕ್ಕುಬಂಧಿ ವಿವರ.

ಈ) <u>ನಮೂನೆ 11 (ಬಿ) ಆಸ್ತಿಗಳಿಗೆ ಸಂಬಂಧಪಟ್ಟಂತೆ</u>

1) ಸ್ಥಳದ ಮಾಲಿಕತ್ವ ದಾಖಲೆ/ಕ್ರಯ ಪತ್ರ
2) ಪಹಣಿ ಪತ್ರಿಕೆ (ಆರ್.ಟಿ.ಸಿ.)
3) ನಿವೇಶನದ ನಕ್ಷೆ.
4) ಕಟ್ಟಡ ತೆರಿಗೆ ರಶೀದಿ ಅಥವಾ ಸದರಿ ಕಟ್ಟಡಕ್ಕೆ ಸಂಬಂಧಪಟ್ಟ ವಿದ್ಯುಚ್ಛಕ್ತಿ ಬಿಲ್ (ಕಟ್ಟಡ ಇದ್ದರೆ ಮಾತ್ರ)
5) ಮಾಲಿಕನ ವಿಳಾಸ ಗುರುತಿನ ಪತ್ರ,
6) ದೃಢೀಕೃತ ಗುರುತಿನ ಚೀಟಿ (ಭಾವಚಿತ್ರವಿರುವ)
7) ಚೆಕ್ಕುಬಂಧಿ ವಿವರ.

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

<u>ಗೆ:</u>

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು.
2) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
3) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

<u>ಪ್ರತಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
2. ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರ ಆಪ್ತ ಕಾರ್ಯದರ್ಶಿಯವರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಯವರಿಗೆ.
4. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.



File No. RD/59/SSC/2025-RD_SSLR-REVENUE DEPATMENT SEC (Computer No. 1721534)
Generated from eOffice by JAYBHEEM, RD-SA(JB)-sslr, SENIOR ASSISTANT, REVENUE DEPARTMENT SEC on 20/03/2025 11:04 AM